**ಆಕಾಶವಾಣಿ 13 ಡಿಸೆಂಬರ್, 2025**

**ಪ್ರದೇಶ ಸಮಾಚಾರ ಶನಿವಾರ**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ ಮಧ್ಯಾಹ್ನ, 12 ಗಂಟೆಗೆ**

**<><><>**

**ರೈತ ಉತ್ಪಾದಕರ ಸಂಸ್ಥೆ – ಎಫ್.ಪಿ.ಓ.ಗಳ,** ಹಣಕಾಸಿನ ನೆರವಿಗೆ ಇರುವ, ಅಡೆತಡೆ ಪರಿಹರಿಸಲು, ಕೇಂದ್ರ ಸರ್ಕಾರ, ತನ್ನ ಪ್ರಾಯೋಜಕತ್ವದ ಯೋಜನೆಯನ್ನು, ಮತ್ತೆ ಐದು ವರ್ಷಗಳ ಕಾಲ ಮುಂದುವರೆಸಲಿದೆ ಎಂದು, ಕೇಂದ್ರ ಕೃಷಿ ಸಚಿವಾಲಯದ ಕಾರ್ಯದರ್ಶಿ, ದೇವೇಶ ಚತುರ್ವೇದಿ ತಿಳಿಸಿದ್ದಾರೆ. 10 ಸಾವಿರ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಗೆ, 2020ರ ಫೆಬ್ರವರಿಯಲ್ಲಿ, ಕೇಂದ್ರ ಸರ್ಕಾರ ಚಾಲನೆ ನೀಡಿತ್ತು. ಕೇಂದ್ರ ಸರ್ಕಾರದ ನಿಯಮಗಳ ಪಾಲನೆ ಮತ್ತು ಹಣಕಾಸಿನ ಅಡೆತಡೆಗಳನ್ನು ಪರಿಹರಿಸಲು, 2026 ರಿಂದ, 2031ರ ವರೆಗೆ, ಯೋಜನೆಯನ್ನು ವಿಸ್ತರಿಸಲಾಗಿದೆ ಎಂದು, ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ.

<><><>

**ಪ್ರಧಾನಮಂತ್ರಿ ಕಿರು ಉದ್ದಿಮೆಗಳ,** ನಿಯಮಬದ್ಧ ಗೊಳಿಸುವಿಕೆ ಯೋಜನೆ – ಪಿ.ಎಂ.ಎಫ್.ಎಂ.ಇ. ಅಡಿ, ಸಾಲ ಸೌಲಭ್ಯ ಪಡೆದು, ಮೊದಲಿದ್ದ ಹಿಟ್ಟಿನ ಗಿರಣಿಯ ಮೌಲ್ಯರ್ಧಿಸಿ, ವಿವಿಧ ಖಾದ್ಯ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ, ಧಾರವಾಡದ, ಮಾಳಮಡ್ಡಿಯ, ಉದ್ಯಮಿ ಶಾಲಿನಿ ನಾಡಗೌಡ.  ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಶಾಲಿನಿ ನಾಡಗೌಡ ಧ್ವನಿ 40 ಸೆಕೆಂದುಗಳು**

<><><>

**2026ರ ಹಂಗಾಮಿಗೆ,** ಕೊಬ್ಬರಿಯ ಕನಿಷ್ಟ ಬೆಂಬಲ ಬೆಲೆ, ಚಿಕ್ಕ ತುಂಡಗಳ, ಮಿಲ್ಲಿಂಗ್ ಕೊಬ್ಬರಿಗೆ, ಪ್ರತಿ ಕ್ವಿಂಟಾಲ್‌ಗೆ 445 ರೂಪಾಯಿ ಹೆಚ್ಚಿಸಿ, 12 ಸಾವಿರದ 27 ರೂಪಾಯಿಗೆ, ಕೇಂದ್ರ ಸರ್ಕಾರ ನಿಗದಿ ಪಡಿಸಿದೆ. ಉಂಡೆ ಕೊಬ್ಬರಿಯ ಬೆಂಬಲ ಬೆಲೆಯನ್ನು, 400 ರೂಪಾಯಿ ಹೆಚ್ಚಿಸಿ, ಪ್ರತಿ ಕ್ವಿಂಟಾಲ್‌ಗೆ, 12 ಸಾವಿರದ ಐನೂರು ರೂಪಾಯಿ ನಿರ್ಧರಿಸಲಾಗಿದೆ. ತೆಂಗು ಬೆಳೆಗಾರರಿಗೆ ಉತ್ತಮ ಲಾಭ, ತೆಂಗಿನ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಪ್ರೋತ್ಸಾಹಿಸಲು, ಕೇಂದ್ರ ಕ್ರಮ ಕೈಗೊಂಡಿದೆ.

<><><>

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ** ಉದ್ಯೋಗ ಖಾತ್ರಿ ಯೋಜನೆ – ಮನರೇಗಾ ಕಾಯ್ದೆಯನ್ನು, ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ – ಪಿ.ಬಿ.ಜಿ.ಆರ್.ವೈ ಎಂದು, ಮರು ನಾಮಕರಣ ಮಾಡಲು, ಕೇಂದ್ರ ಸಚಿವ ಸಂಪುಟ, ಅನುಮೋದಿಸಿದೆ. ಕನಿಷ್ಟ ಕೂಲಿ, ಪ್ರತಿ ದಿನಕ್ಕೆ 240 ರೂಪಾಯಿ ಪರಿಷ್ಕರಿಸುವ ಹಾಗೂ ಗ್ರಾಮೀಣ ಭಾಗದ, ಬಡ ಜನರಿಗೆ ವಾರ್ಷಿಕ, 125 ದಿನಗಳ ಕೂಲಿ ಕೆಲಸವನ್ನು ಖಾತ್ರಿ ಪಡಿಸಲು, ಕೇಂದ್ರ ಸರ್ಕಾರ, ಮಸೂದೆ ಮಂಡಿಸಲಿದೆ ಎಂದು, ಮೂಲಗಳನ್ನು ಉಲ್ಲೇಖಿಸಿ, ಸುದ್ದಿ ಸಂಸ್ಥೆ ವರದಿ ಮಾಡಿದೆ.

<><><>

**ಉತ್ತರಕನ್ನಡ ಜಿಲ್ಲೆ, ಮುಂಡಗೋಡ ತಾಲೂಕು,** ಟಿಬೇಟಿಯನ್ ಕ್ಯಾಂಪ್ ಸಂಖ್ಯೆ 2ರ, ಡ್ರೆಪುಂಗ್ ತಾಶಿ ಗೋಮಾಂಗ್ ಡಿಬೆಟ್ ಹಾಲ್‌ಗೆ, ಟಿಬೇಟಿಯನ್ ಧರ್ಮಗುರು, 14ನೇ ಶ್ರೀ ದಲೈ ಲಾಮಾ ಆಗಮಿಸಿದ್ದಾರೆ. 45 ದಿನಗಳ ಕಾಲ, ಅಧ್ಯಾತ್ಮ ಸಭೆಗಳಲ್ಲಿ ಅವರು, ಭಾಗವಹಿಸಲಿದ್ದಾರೆ. ಬೌದ್ಧ ಭಿಕ್ಕುಗಳು, ಆದರದಿಂದ, ಪೂಜ್ಯ ದಲೈ ಲಾಮಾ ಅವರನ್ನು, ಸ್ವಾಗತಿಸಿದರು.

<><><>

**ರೈತರು ಕೃಷಿ ತೊರೆದು, ಊರು ಬಿಟ್ಟು ಹೋಗದಂತೆ,** ಕೃಷಿ ರಕ್ಷಿಸುವ ರೈತಪರ ಯೋಜನೆಗಳನ್ನು, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ. ಧಾರವಾಡ, ಕರ್ನಾಟಕ ವಿದ್ಯಾವರ್ಧಕ ಸಂಘದ, ಕೃಷಿ ಮತ್ತು ಪರಿಸರ ಮಂಟಪದ ವತಿಯಿಂದ, ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ, 'ಭಾರತದ ಕೃಷಿ ಬಿಕ್ಕಟ್ಟುಗಳು' ಕುರಿತ, ಉಪನ್ಯಾಸ ಮಾಲಿಕೆನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಕೃಷಿ ಕ್ಷೇತ್ರ ಭಾರತದ ಜೀವನಾಡಿ. ಹೊಲಗದ್ದೆಗಳ ಮಣ್ಣಿನಲ್ಲಿ, ದೇಶದ ಭವಿಷ್ಯ ಚಿಗುರಲಿದೆ. ಮಣ್ಣನ್ನು ರಕ್ಷಿಸಬೇಕು. ರೈತರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು, ಪ್ರೇರಣೆ ನೀಡಬೇಕು, ಎಂದರು.

<><><>

**ವಿಜಯನಗರ ಜಿಲ್ಲೆ, ಹೊಸಪೇಟೆಯ,** ತುಂಗಭದ್ರಾ ಅಣೆಕಟ್ಟೆಯ, 24ನೇ ಕ್ರಸ್ಟ್ ಗೇಟ್ ತೆರವು ಕಾರ್ಯ ನಿನ್ನೆ ಆರಂಭವಾಗಿದೆ. ದ್ವಾರದ 10 ಅಡಿ ಭಾಗವನ್ನು, ಗ್ಯಾಸ್ ಕಟರ್ ಮೂಲಕ, ಕತ್ತರಿಸಲಾಗಿದೆ. ಈಗಾಗಲೇ, 18 ಮತ್ತು 20ನೇ ಗೇಟ್‌ಗಳ 10 ಅಡಿಗಳಷ್ಟು ಅಗಲದ, ಕಬ್ಬಿಣದ ಹಲಗೆಯನ್ನು ಕತ್ತರಿಸಿ, ತೆಗೆಯಲಾಗಿದೆ. ಈ ತಿಂಗಳ 20ರ ಬಳಿಕ, ಹೊಸ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಆರಂಭವಾಗಲಿದೆ ಎಂದು, ನಿರೀಕ್ಷಿಸಲಾಗಿದೆ. ನಿತ್ಯ, ಜಲಾಶಯದಿಂದ, 1 ದಶಾಂಶ 8 ಟಿ.ಎಂ.ಸಿ. ಅಡಿಗಳಷ್ಟು ನೀರು ಹರಿದು ಹೋಗಲಿದೆ. ಕಾಲುವೆಗಳಿಗೆ, 10 ಸಾವಿರದ 972 ಕ್ಯೂಸೆಕ್ ಮತ್ತು ನದಿಗೆ, 5 ಸಾವಿರದ 900 ಕ್ಯೂಸೆಕ್ ನೀರು ಹರಿಯುತ್ತಿದೆ.

<><><>

**ಅಖಿಲ ಭಾರತ, ಭಾರತೀಯ** ಸಂಚಾರ ನಿಗಮ ನಿಯಮಿತ, ಪಿಂಚಣಿದಾರರ ಯೋಗಕ್ಷೇಮ ಸಂಘ, ಎ.ಐ.–ಬಿ.ಎಸ್.ಎನ್.ಎಲ್.–ಪಿ.ಡಬ್ಲ್ಯೂ.ಎ., ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಚಿಟಗುಪ್ಪಿ ಆಸ್ಪತ್ರೆ ಸಭಾಂಗಣದಲ್ಲಿ, ಇಂದು, ಕೇಂದ್ರ ಸರ್ಕಾರದ ಆರೋಗ್ಯ ವಿಮೆ ಯೋಜನೆ ಅಡಿ, ಸಿ.ಜಿ.ಎಚ್.ಎಸ್. ವೆಲ್‌ನೆಸ್ ಕೇಂದ್ರದ ಉದ್ಘಾನಾ ಸಮಾರಂಭ ಆಯೋಜಿತವಾಗಿದೆ. ಕೇಂದ್ರದ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಯೋಗಕ್ಷೇಮ ಮತ್ತು ಆರೋಗ್ಯ ಕೇಂದ್ರವನ್ನು, ಇನ್ನು ಕೆಲವೇ ನಿಮಿಷಗಳಲ್ಲಿ ಉದ್ಘಾಟಿಸಲಿದ್ದಾರೆ.

<><><>

**ಸತತ 8 ಬಾರಿ, ಪಶ್ಚಿಮ ಶಿಕ್ಷಕರ** ಮತ ಕ್ಷೇತ್ರದಿಂದ ಆಯ್ಕೆಗೊಂಡು, ವಿಧಾನ ಪರಿಷತ್ ಸದಸ್ಯರಾಗಿ, 45 ವರ್ಷಗಳನ್ನು ಪೂರೈಸಿದ, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ಅವರಿಗೆ, ಅಭಿನಂದನಾ ಸಮಿತಿ, ಗೌರವಾರ್ಪಣೆ ಕಾರ್ಯಕ್ರಮ ಇಂದು ಸಂಜೆ ಆಯೋಜಿಸಿದೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ನೆಹರು ಮೈದಾನದಲ್ಲಿ, ಸಂಜೆ 4 ಗಂಟೆಗೆ ಆಯೋಜಿತ ಕಾರ್ಯಕ್ರಮವನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಸೇರಿದಂತೆ, ವಿಶೇಷ ಆಹ್ವಾನಿತ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಸಹಸ್ರಾರು ಶಿಕ್ಷಕರು ಭಾಗವಹಿಸಲಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**